ಕುಂದಾಪುರ ತಾಲ್ಲೂಕುಗಳ ಸುಮಾರು 9ಗ್ರಾಮಗಳ 6728 ಎಕರೆ ಜಮೀನಿಗೆ ನೀರಾವರಿ ಸೌಲಭ್ಯವಾಗುವುದು. ಮತ್ತು ವಿತರಣಾ ನಾಲೆಗಳ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಮುಗಿದನಂತರ ಸರ್ವೇ ನಂಬರ್ ಲಭ್ಯವಾಗುವುದು.

ಆ) ಸದರಿ ಯೋಜನೆಯನ್ನು 1999ರೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೆ.ಆರ್.ಪೇಟೆ ತಾಲ್ಲೂಕು ರಂಗನಾಥಪುರದಲ್ಲಿ ಕೆ.ಇ.ಬಿ. ಸ್ಟೇಷನ್ ಸ್ಥಾಪನೆ.

2996:(4052):

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಆರ್.ಪೇಟೆ ತಾಲ್ಲೂಕು ರಂಗನಾಥಪುರದಲ್ಲಿ ಕೆ.ಇ.ಬಿ.ಸ್ಟೇಷನ್ ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೇ;

ಆ) ಹಾಗಿದ್ದಲ್ಲಿ, ಇದರ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಶರಣ ಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಕೆ.ಆರ್.ಪೇಟೆ ತಾಲ್ಲೂಕಿನ ರಂಗನಾಥ ಪುರದಲ್ಲಿ ಕೆ.ಇ.ಬಿ. ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಮಂಡಳಿಯಲ್ಲಿ ಇರುವುದಿಲ್ಲ. ಆದರೆ ಈ ಗ್ರಾಮದಿಂದ ಸುಮಾರು 6 ಕಿ.ಮೀ. ದೂರದಲ್ಲಿ ಇರುವ ಸಂತೇಬಾಚಳ್ಳಿ ಎಂಬ ಗ್ರಾಮದಲ್ಲಿ ಒಂದು 66 ಕೆ.ವಿ. ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆಗೆ ಮಂಡಳಿಯ ತಾಂತ್ರಿಕ ಸಮಿತಿಯು ಫೆಬ್ರವರಿ-98ರಲ್ಲಿ ಅನುಮೋದನೆ ನೀಡಿದೆ.

ಆ) ಸಂತೇಬಾಚಹಳ್ಳಿ ಗ್ರಾಮದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ 66:11 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ನ ಕಾಮಗಾರಿಯ ಪ್ರಾರಂಭಿಕ ಕೆಲಸಗಳಿಗಾಗಿ ಪ್ರಸಕ್ತ ಸಾಲಿನ (1998-99)ರ ಆಯವ್ಯಯದಲ್ಲಿ 5.0 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಮಂಡಳಿಯು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ, ಸದರೀ ಸಬ್ ಸ್ಟೇಷನ್ನಿನ ಕಾಮಗಾರಿಯನ್ನು ಮಂಡಳಿಯ ಸ್ವಂತ ಸಂಪನ್ಮೂಲಗಳಿಂದ ಕೈಗೊಳ್ಳಲು ಸಾಧ್ಯವಿಲ್ಲ. ಆದುದರಿಂದ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ ಸೌಲಭ್ಯವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ. ಸದರೀ ಸಬ್ ಸ್ಟೇಷನ್ನಿ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಭೂಮಿಯು ಮಂಡಳಿಯ ವಶಕ್ಕೆ ಬಂದ ನಂತರ, ಮತ್ತು ವಿವರವಾದ ಯೋಜನಾ ವರದಿಗೆ ಮಂಡಳಿಯ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಸದರೀ ಸರ್ವೆ ಸ್ಟೇಷನ್ನಿನ ಪೂರ್ವಭಾವೀ ಕೆಲಸಗಳನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ.

ಹೇಮಾವತಿ ಯೋಜನೆಗೆ ಸಂಬಂಧ ಪಟ್ಟಂತೆ ಶ್ರೀ ಕೆ.ಸಿ.ರೆಡ್ಡಿ ಸಮಿತಿಯ ವರದಿ ಮೇಲೆ ಕೈಗೊಂಡ ಕ್ರಮಗಳು.

2997:(4054)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ) ಮಾನ್ಯ ಬೃಹತ್ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಯೋಜನೆ ಅನುಷ್ಠಾನಕ್ಕೆ ಬಂದ ಉದ್ದೇಶ ಆರೆ ಖಿಷ್ಕಿ ಬೆಳೆಗೆ ಎಂದು ತೀರ್ಮಾನವಾಗಿ ಈಗ ನೀರಿನ ಬಳಕೆಯ ವ್ಯತ್ಯಾಸದಿಂದ ಕೇವಲ 40 ಭಾಗದ ಜನರಿಗೆ ಅನುಕೂಲವಾಗಿದ್ದು, ಇನ್ನ ಶೇ.60 ಭಾಗಕ್ಕೆ ಯಾವುದೇ ರೀತಿಯ ಪ್ರಯೋಜನ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಿಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಇ) ಈ ಯೋಜನೆಯ ಬಗ್ಗೆ ಶ್ರೀ ಅಂಗಡಿ ಮತ್ತು ಶ್ರೀ ಕೆ.ಸಿ.ರೆಡ್ಡಿ ಸಮಿತಿಯ ವರದಿ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು):

ಅ) ಮೇಲ್ಭಾಗದ ರೀಚ್‌ನಲ್ಲಿ ಬೆಳೆ ಉಲ್ಲಂಘನೆ ಆಗುತ್ತಿರುವುದರಿಂದ ಕೋಡಿ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ಸಮರ್ಪಕವಾಗಿ ನೀರು ಸಿಗುತ್ತಿಲ್ಲವೆಂಬ ಬಗ್ಗೆ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುತ್ತವೆ.

ಆ) ನೀರಿನ ಬಳಕೆ ಬೆಳೆ ಉಲ್ಲಂಘನೆ ನಿರ್ವಹಣಾ ಪದ್ದತಿ ಇವುಗಳ ಬಗ್ಗೆ ವಿಶ್ಲೇಷಿಸಿ ವರದಿ ನೀಡಲು ಸರ್ಕಾರದವರು 18-5-1998ರಲ್ಲಿ ಶ್ರೀ ವೈ.ಉಮೇಶ್‌ರಾವ್ ರವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಸಮಿತಿಯನ್ನು ರಚಿಸಿರುತ್ತಾರೆ. ಸಮಿತಿಯು ಇದರ ಬಗ್ಗೆ ಕಾರ್ಯೋನ್ಮುಖವಾಗಿದ್ದು, ವರದಿಯನ್ನು ಇನ್ನು 3 ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವ ನಿರೀಕ್ಷೆಯಿದೆ. ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಸದರಿ ವಿಷಯದ ಬಗ್ಗೆ ಇವರುಗಳಿಂದ ಯಾವುದೇ ವರದಿಗಳಿರುವುದಿಲ್ಲ.